ಕರ್ನಾಟಕ ವಿಧಾನಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 30-03-2021 ಪ್ರಶ್ನೆ ಸಂಖ್ಯೆ : 2094(2461)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕೆ. ಹರೀಶ್ ಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರ ನೀಡಬೇಕಾದ ದಿನಾಂಕ : 30-03-2021

ಉತ್ತರಿಸುವ ಸಚಿವರು: ಮಾನ್ಯ ನಗರಾಭಿವೃದ್ಧಿ ಸಚಿವರು

ವಿಷಯ : ಹೋಟೆಲ್ ಹಾಗೂ ಉಪಹಾರ ಮಂದಿರ (ಕ್ಯಾಂಟೀನ್) ಗಳ ಬಗ್ಗೆ

(ಅ) ರಾಜ್ಯದಲ್ಲಿರುವ ನೋಂದಾಯಿತ ಹೋಟೆಲ್, ಕ್ಯಾಂಟೀನ್ (ಉಪಹಾರ ಮಂದಿರ) ಗಳ ಸಂಖ್ಯೆ ಎಷ್ಟು;

(ಆ) ರಾಜ್ಯದಲ್ಲಿರುವ ಹೋಟೆಲ್ ಮಾಲೀಕರ ಸಂಘಗಳ ಬಗ್ಗೆ ಮಾಹಿತಿಯನ್ನು ನೀಡುವುದು;

(ಇ) ನಗರ ಪ್ರದೇಶಗಳಲ್ಲಿ ಹೋಟೆಲ್ ಹಾಗೂ ಕ್ಯಾಂಟೀನ್ (ಉಪಹಾರ ಮಂದಿರ) ತೆರೆಯುವ ಬಗ್ಗೆ ಹಾಗೂ ಹೋಟೆಲ್ ಕ್ಯಾಂಟೀನ್‌ಗಳ ಹೆಸರನ್ನು ನೋಂದಾಯಿಸುವ ಬಗ್ಗೆ ಇರುವ ನಿಯಮ ಹಾಗೂ ಮಾನದಂಡಗಳ ಬಗ್ಗೆ ಮಾಹಿತಿ ನೀಡುವುದು;

(ಈ) ಪ್ರತಿ ತಿಂಗಳು ಹೋಟೆಲ್ ಹಾಗೂ ಕ್ಯಾಂಟೀನ್‌ಗಳಿಂದ ಸರ್ಕಾರಕ್ಕೆ ಸಂಗ್ರಹವಾಗುತ್ತಿರುವ ಆದಾಯವೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಉ) ಬೀದಿ ಬದಿ ಕ್ಯಾಂಟೀನ್‌ಗಳಿಗೆ ಉಪಹಾರ ಹಾಗೂ ಇತರೆ ತಿಂಡಿಗಳಿಗೆ ತೆರಿಗೆಯನ್ನು ವಿಧಿಸಲಾಗುತ್ತಿದೆಯೇ; (ಮಾಹಿತಿಯನ್ನು ನೀಡುವುದು)

(ಊ) ತೆರಿಗೆ ವಿಧಿಸುತ್ತಿದ್ದಲ್ಲಿ, ತೆರಿಗೆ ದರ ಹಾಗೂ ಶುಲ್ಕದ ಪ್ರಮಾಣವೆಷ್ಟು? (ಸಂಪೂರ್ಣ ಮಾಹಿತಿ ನೀಡುವುದು)